# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 587
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶಿತರು)
3) ಉತ್ತರಿಸಬೇಕಾದ ದಿನಾಂಕ: : 16-09-2021 (Time Taken)
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ವಿತ್ತ ಸಚಿವಾಲಯದಿಂದ 2020-21 ಮತ್ತು 2021-22ನೇ ಆರ್ಥಿಕ ವರ್ಷಗಳಲ್ಲಿ GST ಲುಕ್ಸಾನಿಗೆ ಪರ್ಯಾಯವಾಗಿ ಕೇಂದ್ರ ಸರ್ಕಾರ ಸ್ಥಾಪಿಸಿರುವ GST ಪರಿಹಾರ ನಿಧಿಯಿಂದ ಬರಬೇಕಾಗಿರುವ ಪರಿಹಾರದ ಮೊತ್ತವೆಷ್ಟು; (ವರ್ಷಾವಾರು ಸಂಪೂರ್ಣ ಮಾಹಿತಿ ನೀಡುವುದು)</td><td>2020-21ನೇ ಮತ್ತು 2021-22ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ಜಿಎಸ್‌ಟಿ ಪರಿಹಾರ ನಿಧಿಯಿಂದ ಬರಬೇಕಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ:<br><table><tr><th>ಆರ್ಥಿಕ ವರ್ಷ</th><th>ಮೊತ್ತ</th></tr><tr><td>2020-21</td><td>ರೂ.31,889 ಕೋಟಿಗಳು</td></tr><tr><td>2021-22 (ಆಗಸ್ಟ್ ಅಂತ್ಯಕ್ಕೆ)</td><td>ರೂ.15,332 ಕೋಟಿಗಳು</td></tr></table></td></tr>
<tr><td>ಆ)</td><td>GST ಲುಕ್ಸಾನಿಗೆ ಪರ್ಯಾಯವಾಗಿ 2020-21 ಮತ್ತು 2021-22ರ ಆರ್ಥಿಕ ವರ್ಷಗಳಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ನೀಡಿರುವ ಪರಿಹಾರ ಮೊತ್ತವೆಷ್ಟು; ಮತ್ತು ಎಷ್ಟು ಕಂತುಗಳಲ್ಲಿ ಮತ್ತು ಯಾವ ರೂಪದಲ್ಲಿ ನೀಡಲಾಗಿದೆ;</td><td>ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ನೀಡಿರುವ ಪರಿಹಾರ ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ.<br><table><tr><th>ಪರಿಹಾರದ ರೂಪ</th><th>2020-21</th><th>2021-22 (ಇಲ್ಲಿಯವರೆಗೆ)</th></tr><tr><td>ನಷ್ಟ ಪರಿಹಾರ</td><td>ರೂ.13,789 ಕೋಟಿ (6 ಕಂತುಗಳಲ್ಲಿ)</td><td>ರೂ. 3,845 ಕೋಟಿ (2 ಕಂತುಗಳಲ್ಲಿ)</td></tr><tr><td>ನಷ್ಟ ಪರಿಹಾರ ಸಾಲ</td><td>ರೂ.12,407 ಕೋಟಿ (19 ಕಂತುಗಳಲ್ಲಿ)</td><td>ರೂ. 8,542 ಕೋಟಿ (01 ಕಂತಿನಲ್ಲಿ)</td></tr><tr><td>ಒಟ್ಟಾರೆ</td><td>ರೂ.26,196ಕೋಟಿ</td><td>ರೂ. 12,387 ಕೋಟಿ</td></tr></table></td></tr>
<tr><td>ಇ)</td><td>ಒಂದು ವೇಳೆ ಕೇಂದ್ರ ಸರ್ಕಾರ ವಿಶೇಷ ಯೋಜನೆ ಅಡಿ GST ಪರಿಹಾರವನ್ನು RBI ಮುಖೇನ ಸಾಲದ ರೂಪದಲ್ಲಿ ನೀಡಿದ್ದಲ್ಲಿ, ರಾಜ್ಯ ಸರ್ಕಾರ ತನಗೆ ಅಗತ್ಯವಿರುವ ಸಾಲವನ್ನು ಇತರೆ ಮೂಲಗಳಿಂದ ಪಡೆಯಲು FRBM ಮಿತಿಯಿಂದ ಬಾಧಕವಾಗುವುದಿಲ್ಲವೆ; (ಹಾಗಿದ್ದಲ್ಲಿ ವಿವರ ನೀಡುವುದು)</td><td>ಕೇಂದ್ರ ಸರ್ಕಾರವು GST ಪರಿಹಾರವನ್ನು Special Window ಮುಖಾಂತರ ಸಾಲ ಪಡೆದು ರಾಜ್ಯಕ್ಕೆ ನೀಡುತ್ತಿದ್ದು, ಈ ಸಾಲದ ಮರುಪಾವತಿಯನ್ನು GST ಸೆಸ್‌ನಿಂದ ಬರುವ ಹಣದಲ್ಲಿ ಕೇಂದ್ರ ಸರ್ಕಾರವೇ ಭರಿಸಲಿದ್ದು, ರಾಜ್ಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ. GST ನಷ್ಟಪರಿಹಾರ ಸಾಲದಿಂದ ರಾಜ್ಯ ಸರ್ಕಾರವು ಇತರೆ ಮೂಲಗಳಿಂದ ಸಾಲ ಪಡೆಯಲು ಯಾವುದೇ ಬಾಧಕವಾಗುವುದಿಲ್ಲ.</td></tr>
</table>

ಮು.ತಿ.ನೋ.

| | | |
|---|---|---|
| ಈ) | ಇತ್ತೀಚೆಗೆ ಕೇಂದ್ರ ಸರ್ಕಾರದ ಆರ್ಥಿಕ ಸಚಿವರು ರಾಜ್ಯಕ್ಕೆ ಹೆಚ್ಚಿನ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿರುವುದಾಗಿ ವರದಿಯಾಗಿರುವುದು ನಿಜವೇ? (ಹಾಗಿದ್ದಲ್ಲಿ, ಈ ಬಗ್ಗೆ ವಿವರಗಳನ್ನು ನೀಡುವುದು) | ಅಧಿಕೃತ ಮಾಹಿತಿ ಇರುವುದಿಲ್ಲ |

ಸಂಖ್ಯೆ: ಆಇ 73 ಸಿಎಸ್ಎಲ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ